ಸದಸ್ಯರ ಹೆಸರು ಶ್ರೀ ದಿನೇಶ್ ಗುಂಡೂರಾವ್(ಗಾಂದೀನಗರ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ ರಾಜ್ಯದ ಆಡಳಿತ ಕೇಂದ್ರವಾದ ವಿಧಾನಸೌಧಕ್ಕೆ ಒದಗಿಸಲಾಗಿರುವ ಭದ್ರತೆಯಿಂದ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ ಹಾಗಿದ್ದಲ್ಲಿ ತಮ್ಮ ಕೆಲಸ ಕಾರ್ಯಗಳಿಗಾಗಿ ದೂರದ ಊರುಗಳಿಂದ ವಿಧಾನಸೌಧಕ್ಕೆ ಬರುವ ಸಾರ್ವಜನಿಕರಿಗೆ ಸಚಿವರು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಲು ಸರ್ಕಾರ ಯಾವ ರೀತಿ ಅನುಕೂಲಗಳನ್ನು ಕಲ್ಪಿಸಿ ಕೊಡಲಾಗುವುದು?

ಉತ್ತರ

ಅ ಇಲ್ಲ

ಆ ಹಿಂದೆ ಮಧ್ಯಾಹ್ನ 3 30ರಿಂದ 5 00 ಘಂಟೆಯವರೆಗೆ ಇದ್ದ ಸಂದರ್ಶನ ವೇಳೆಯನ್ನು 3 00 ಘಂಟೆಯಿಂದ 5 00 ಘಂಟೆಯವರೆಗೆ ವಿಸ್ತರಿಸಿ ಪ್ರಸ್ತುತ ನಿಗದಿಪಡಿಸಲಾಗಿದೆ ಸಂದರ್ಶನ ವೇಳೆಯನ್ನು ಹೊರಡುಪಡಿಸಿ ಸಚಿವರು ಅಥವಾ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಬೇಕೆಂದು ಅನಿರೀಕ್ಷಿತವಾಗಿ ಸಾರ್ವಜನಿಕರು ಬಂದಲ್ಲಿ ಸಂಬಂಧಿಸಿದ ಸಚಿವರು ಅಥವಾ ಹಿರಿಯ ಅಧಿಕಾರಿಯ ಆಪ್ತ ಕಾರ್ಯದರ್ಶಿಯವರೊಂದಿಗೆ ಸಂಪರ್ಕಿಸಿ ಭೇಟಿ ಮಾಡಬಹುದೆಂದು ತಿಳಿಸಿದಲ್ಲಿ, ಅಂಥಹವರಿಗೆ ಅವಕಾಶ ನೀಡಲಾಗುತ್ತದೆ ಅಲ್ಲದೆ, ಸಚಿವರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಪೂರ್ವಭಾವಿಯಾಗಿ ಸಂದರ್ಶನವನ್ನು ನಿಗದಿಪಡಿಸಿಕೊಂಡಿದ್ದಲ್ಲಿ ಮತ್ತು ಅಂತಹ ಸಾರ್ವಜನಿಕರಿಗೆ ಪ್ರವೇಶ ನೀಡಲು ಸಂಬಂಧಪಟ್ಟ ಸಚಿವರ ಅಥವಾ ಹಿರಿಯ ಅಧಿಕಾರಿಗಳ ಆಪ್ತ ಕಾರ್ಯದರ್ಶಿಗಳು ಕೋರಿಕೆ ಸಲ್ಲಿಸಿದಲ್ಲಿ, ಅಂಥಹವರಿಗೂ ಸಹ ಪ್ರವೇಶಾವಕಾಶ ನೀಡಲಾಗುತ್ತಿದೆ

ಆಡಳಿತ ಸುಧಾರಣಾ ಆಯೋಗದ ವರದಿ ಅನುಷ್ಠಾನ

ಚುಕ್ಕೆ ಗುರುತಿಲ್ಲದ ಪ್ರಶ್ನ ಸಂಖ್ಯೆ 11(483)

ಸದಸ್ಯರ ಹೆಸರು ಶ್ರೀ ಸಭಾಪತಿ ಯು ಆರ್ (ಉಡುಪಿ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಗಳು)

ಪ್ರಶ್ನೆ

1 ಆಡಳಿತ ಸುಧಾರಣಾ ಆಯೋಗದ ವರದಿಯನ್ನು ಜಾರಿಗ ತರಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು, ವರದಿಯಲ್ಲಿನ ಪ್ರಮುಖ ಶಿಫಾರಸ್ಸುಗಳು ಯಾವುದು (ವಿವರಿಸುವುದು)?

2 ಈ ವರದಿಯನ್ನು ಅನುಷ್ಠಾನಕ್ಕೆ ತರಲು ಸಮಯ ನಿಗದಿಗೊಳಿಸಲಾಗಿದೆಯೇ?

ಉತ್ತರ

1 ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ಮಧ್ಯಂತರ ವರದಿಯನ್ನು ಜನವರಿ 2001ರಲ್ಲಿ ನೀಡಿದ್ದು ತನ್ನ ಮಧ್ಯಂತರ ವರದಿಯಲ್ಲಿ ಸಚಿವಾಲಯದ ಸುಧಾರಣೆ, ಜಿಲ್ಲಾ ಆಡಳಿತ ಸುಧಾರಣೆ ಮತ್ತು ಉತ್ತಮ ಆಡಳಿತ ನೀಡುವ ಬಗ್ಗೆ ಶಿಫಾರಸ್ಸುಗಳನ್ನು ಮಾಡಿದೆ ವರ್ಗಾವಣೆ ನೀತಿ ಸಾರ್ವಜನಿಕ ಸನ್ನದುಗಳ ತಯಾರಿಕೆ, ಸಚಿವಾಲಯದಲ್ಲಿ ಏಕ ಕಡತ ವದ್ಧತಿ ಹಾಗೂ ಪೀರಾಧಿಕಾರಿ ಪದ್ಧತಿಗಳನ್ನು ಜಾರಿಗೆ ತರುವುದು, ಭ್ರಷ್ಟಾಚಾರ ನಿರ್ಮೂಲನ ಉನ್ನತ ಸಮಿತಿ ಇತ್ಯಾದಿಗಳನ್ನು ಒಳಗೊಂಡಂತೆ ಹಲವಾರು ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆ ಅಂತಿಮ ವರದಿಯನ್ನು ದಿನಾಂಕ 27 12 2001ರಲ್ಲಿ ಸ್ವೀಕೃತವಾಗಿದ್ದು ಇದರಲ್ಲಿ ಈ ಕೆಳಕಂಡಂತೆ ವಿಷಯಗಳು ಒಳಗೊಂಡಿರುತ್ತದೆ

1 ಸರಿಗಾತ್ರದ ಕ್ರಮಗಳು

2 ಆರ್ಥಿಕ ಮಿತವ್ಯಯದ ಕ್ರಮಗಳು

3 ಆಡಳಿತಾತ್ಮಕ ಕ್ರಮಗಳು

4 ವೃತ್ತಿಯ ಆಯ್ಕೆಯ ಅವಕಾಶಗಳು

5 ಇ -ಆಡಳಿತ

6 ಪ್ರಕಾರ್ಯಗಳ ಪುನರಾವಲೋಕನ ನಡೆಸಿದ 13 ಇಲಾಖೆಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸುಗಳು

7 ನಣ್ಣ ಯೋಜನೆಗಳನ್ನು ವಿಲೀನಗೊಳಿಸುವುದು

8 ಬೇರೆಯವರಿಗೆ ಪಹಿಸುವ ಕ್ಷೇತ್ರಗಳನ್ನು ಗುರುತಿಸುವುದು

2 ಅನುಷ್ಠಾನಗೊಳಿಸಲು ಯಾವುದೇ ಕಾಲಾವಕಾಶ ನಿಗದಿಪಡಿಸಿಲ್ಲವಾದರೂ, ಶಿಫಾರಸ್ಸುಗಳನ್ನು ಪರಿಶೀಲಿಸಿ ಹಂತ ಹಂತವಾಗಿ ಜಾರಿಗೊಳಿಸಲಾಗುವುದು

ನಿಷ್ಕ್ರಿಯ ಅಧಿಕಾರಿಗಳ ಕಡ್ಡಾಯ ನಿವೃತ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 12(488)

ಸದಸ್ಯರ ಹೆಸರು ಶ್ರೀ ಸಭಾಪತಿ ಯು ಆರ್ (ಉಡುಪಿ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಗಳು)

ಪ್ರಶ್ನೆ

ಅ) ನಿಷ್ಕ್ರಿಯ ಅಧಿಕಾರಿಗಳನ್ನು ಕರ್ನಾಟಕ ಸಿವಿಲ್ ಸೇವಾ ನಿಯಮಗಳ 285ನೇ ನಿಯಮದ ಪ್ರಕಾರ ಕಡ್ಡಾಯ ನಿವೃತ್ತಿಗೊಳಿಸಲಾಗುವುದೇ?

ಆ) ಹಾಗಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಎಷ್ಟು ಮಂದಿ ನಿಷ್ಕ್ರಿಯ ಅಧಿಕಾರಿಗಳೆಂದು ಗುರುತಿಸಲಾಗಿದೆ, ಅವರುಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಉತ್ತರ

ಅ) ಹೌದು

ಆ) ಲಭ್ಯವಿರುವ ಮಾಹಿತಿಯ ಪ್ರಕಾರ, ಈ ಕೆಳಕಂಡ ಮೂವರು ಅಧಿಕಾರಿಗಳನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ, ಕರ್ನಾಟಕ ಸಿವಿಲ್ ಸೇವಾ ನಿಯಮಗಳ ನಿಯಮ 285(4)ರಡಿಯಲ್ಲಿ ಸೇವೆಯಿಂದ (ಕಡ್ಡಾಯವಾಗಿ) ನಿವೃತ್ತಿಗೊಳಿಸಲಾಗಿದ

1) ಶ್ರೀ ಎ ಸಿ ಫರ್ನಾಂಡೀಸ್,
ಅಬಕಾರಿ ಉಪ ಅಧೀಕ್ಷಕರು,
ಅಬಕಾರಿ ಇಲಾಖೆ